International Journal of Kannada Research
www.kannadajournal.com

**ISSN: 2454–5813**
IJKR 2024; 10(2): 118-122
© 2024 IJKR
www.kannadajournal.com
Received: 14-02-2024
Accepted: 17-03-2024

**ನಾಗೇಶ ಬಿ**
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಳವಳ್ಳಿ, ಮಂಡ್ಯ ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ನಾಗೇಶ ಬಿ**
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಳವಳ್ಳಿ, ಮಂಡ್ಯ ಜಿಲ್ಲೆ, ಕರ್ನಾಟಕ, ಭಾರತ

# ಜಲಗಾರ ನಾಟಕ ಮತ್ತು ವಚನಕಾರರ ಕಾಯಕ ತತ್ವ

**ನಾಗೇಶ ಬಿ**

**DOI:** https://doi.org/10.22271/24545813.2024.v10.i2b.975

**ಪೀಠಿಕೆ**

ಜಲಗಾರ ನಾಟಕ ಕುವೆಂಪು ಅವರ ಆರಂಭಿಕ ರಚನೆಗಳಲ್ಲಿ ಒಂದು, ಅಷ್ಟೇ ಅಲ್ಲ ಅತ್ಯಂತ ಮಹತ್ವಪೂರ್ಣವಾದದ್ದು ಹೌದು. ಬೀದಿ ಗುಡಿಸುವ ಜಲಗಾರನೊಬ್ಬನು 'ಕರ್ಮವಾರಾಧನೆ, ಸೇವೆಯೇ ಪೂಜೆ' ಎಂದು ಭಾವಿಸಿ ಮಾನಸಿಕ ಔನ್ನತ್ಯ ತಲುಪಿದ್ದನ್ನು ನಾಟಕವು ಚಿತ್ರಿಸುತ್ತದೆ. ನಮ್ಮ ಸುತ್ತಲ ಸಮಕಾಲೀನ ಬದುಕಿನಲ್ಲಿ ಇಂಥ ಕರ್ಮಯೋಗಿಗಳಿರಬಹುದಾದರೂ ನಾಟಕ ಅಂಥ ಸಾಮಾಜಿಕ ಬದುಕಿನ ವಾಸ್ತವ ನಿರೂಪಣೆಗಷ್ಟೇ ನಿಲ್ಲದೇ ಅದನ್ನೊಂದು ತತ್ವದ ನೆಲೆಗೇರಿಸುತ್ತದೆ. ತನ್ನ ದಿನದಿನದ ಕಾಯಕದಲ್ಲಿ ಮಗ್ನನಾಗಿ ಅದರಲ್ಲಿಯೇ ದೇವರನ್ನು ಕಾಣುತ್ತಾ 'ಊರ ಜಲಗಾರ'ನು 'ಜಗದ ಜಲಗಾರ'ನಾದ ಶಿವನಲ್ಲಿ ಬೆರೆಯುವ ಸಾಂಕೇತಿಕ ಚಿತ್ರಣನೀಡುತ್ತದೆ. ಆ ಮೂಲಕ ದುಡಿಮೆಯ ಮೂಲಕವೇ ದೈವತ್ವದ ನೆಲೆಗೇರುವ 'ಸಾರ್ವಕಾಲಿಕ ಪ್ರಜ್ಞೆ'ಯೊಂದನ್ನು ಪ್ರತಿಮಾ ವಿಧಾನದಿಂದ ಅರ್ಥಪೂರ್ಣವಾಗಿ ನಮ್ಮ ಮುಂದಿಡುತ್ತದೆ. ಲಿಂಗದೇವರು ಹಳೆಮನೆಯವರು ಹೇಳುವಂತೆ "ಕುವೆಂಪು ಅವರ ಬಹುತೇಕ ನಾಟಕಗಳ ವಸ್ತು ಪುರಾಣದಿಂದ ಆರಿಸಿಕೊಂಡವು. ಕೆಲವು ನಾಟಕಗಳು ಸಮಕಾಲೀನ ಎನ್ನುವಂತೆ ಕಂಡರೂ ಕುವೆಂಪು ಅವುಗಳನ್ನು ಸಮಕಾಲೀನ ವಾಸ್ತವವಾದಿ ನಾಟಕಗಳನ್ನಾಗಿ ಪರಿಗಣಿಸದೆ ಪುರಾಣಗಳನ್ನಾಗಿಸುತ್ತಾರೆ. ಕುವೆಂಪು ತಾವು ಆರಿಸಿಕೊಂಡ ವಸ್ತುಗಳ ಮೂಲಕ ಸಾರ್ವಕಾಲಿಕ ಸತ್ಯ ಮತ್ತು ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆಯೇ ವಿನಹ ಸಮಕಾಲೀನ ಸತ್ಯಗಳನ್ನಲ್ಲ. ಸಮಕಾಲಿನ ಸತ್ಯ ಎನ್ನುವುದು ಕುವೆಂಪು ದೃಷ್ಟಿಯಲ್ಲಿ ವ್ಯಕ್ತಿನಿಷ್ಠವಾದುದು. ಅದು ಇಂದು ಸತ್ಯ ಇದ್ದು ನಾಳೆ ಸುಳ್ಳಾಗಬಹುದು. ಆದರೆ ಸಾರ್ವಕಾಲಿಕ ಸತ್ಯಗಳು ಎಲ್ಲ ಕಾಲಕ್ಕೂ ಸತ್ಯಗಳೇ, ಅವುಗಳನ್ನು ಅವರು ಪ್ರತಿಮಾ ಸೃಷ್ಟಿಯ ಮೂಲಕ ಚಿರಂತನಗೊಳಿಸುವ ಪ್ರಯತ್ನಕ್ಕೆ ಮುಂದಾಗುತ್ತಾರೆ."[1]

ಭಾರತೀಯ ಬದುಕನ್ನು ಅಸಹನೀಯವನ್ನಾಗಿಸಿರುವ ಚಾತುರ್ವರ್ಣದ ಅಮಾನುಷ ಆಚರಣೆಗಳು ಕುವೆಂಪು ಅವರನ್ನು ಮತ್ತೆ ಮತ್ತೆ ಕಾಡಿವೆ. ಜಲಗಾರ ನಾಟಕದಲ್ಲಿ ಕುವೆಂಪು ಪಾರ್ವರು ಶ್ರೇಷ್ಠವೆಂದು ಭಾವಿಸಿರುವ ಶಾಸ್ತ್ರ, ವಿದ್ಯೆ ಕಲಿಕೆಗಳಿಗೆ ವಿರುದ್ಧವಾಗಿ ಜಲಗಾರನ ಕಾಯಕ ನಿಷ್ಠೆಯನ್ನು ಪ್ರತಿದ್ವಂದ್ವಿಯಾಗಿಸುತ್ತಾರೆ.

ದುಡಿಮೆ ಅಥವಾ ಶ್ರಮದ ಮೂಲಕವೇ ಮಾನವ ಸಂಸ್ಕೃತಿಯು ವಿಕಾಸವಾಗುತ್ತಾ ಬಂದಿದೆ. ಶ್ರಮದ ಮೂಲಕವೇ ಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರವಾಗುತ್ತಾ ಬಂದಿದ್ದರೂ ಕಾಲ ಕಳೆದಂತೆ ಜ್ಞಾನ–ತಂತ್ರಜ್ಞಾನಗಳು ಕೆಲವೇ ಜನರ ಏಕಸ್ವಾಮ್ಯಕ್ಕೆ ಒಳಗಾಗಿ ಶ್ರಮದ ದುಡಿಮೆ ನಿಕೃಷ್ಟ ಸ್ಥಾನಕ್ಕೆ ತಳ್ಳಲ್ಪಟ್ಟಿತು. ದೈಹಿಕ ಶ್ರಮದ ದುಡಿಮೆ ಮತ್ತು ಬೌದ್ಧಿಕ ಶ್ರಮದ ಶಾಸ್ತ್ರ, ವಿದ್ಯೆಗಳ ನಡುವೆ ಆಕಾಶ ಭೂಮಿಗಳ ಅಂತರ ಬೆಳೆಯುತ್ತಾ ಹೋಗಿ ಸಂಪತ್ತಿನ ಒಡೆತನ ಕೆಲವೇ ಜನರ ಕೈ ಸೇರಿ ಅದೇ ಶೋಷಣೆಯ ಮೂಲವಾಯಿತು. ದೈಹಿಕ ಶ್ರಮವನ್ನೇ ಮೆಚ್ಚಿ ಬದುಕುವವನು ಕಡುಬಡವನಾಗಿಯೇ ಉಳಿದು ಕೀಳರಿಮೆಗೆ ಒಳಗಾಗುವಂತಾಯಿತು.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ವಚನ ಚಳುವಳಿಯು ಇಂಥ ಕಡುಬಡವರಾದ ಶ್ರಮಜೀವಿಗಳಲ್ಲಿಯೂ ಕಾಯಕ ತತ್ವದ ಮೂಲಕ ಅಪಾರವಾದ ಅಭಿಮಾನ ಮತ್ತು ಆತ್ಮವಿಶ್ವಾಸವನ್ನು ತುಂಬಿತು. ಈ ಆತ್ಮಶಕ್ತಿ ಎಂತಹ ಉನ್ನತ ಸ್ಥಿತಿಯನ್ನು ತಲುಪಿತ್ತು ಎಂಬುದಕ್ಕೆ ಲದ್ದೆಯ ಸೋಮಣ್ಣನ ಈ ವಚನವನ್ನು ನೋಡಬಹುದು.

ಯಾವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರುಲಿಂಗ ಜಂಗಮದ ಮುಂದಿಟ್ಟು
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾದಿ ಬಂದಡೆ ನರಳು, ಬೇನೆ ಬಂದರೆ ಒರಲು
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ
ಭಾಪು ಲದ್ದೆಯ ಸೋಮ.

ನಮಗೆ ದೊರೆತಿರುವ ಲದ್ದೆಯ ಸೋಮಣ್ಣನ ಈ ಒಂದೇ ವಚನ ವಾಸ್ತವಿಕ ನೆಲೆಯಲ್ಲಿ ಜೀವನವನ್ನು ಎದುರುಗೊಳ್ಳುವ ಮಹಾಮಾರ್ಗವನ್ನು ಸೂಚಿಸುತ್ತದೆ. ಕಾಯಕಯೋಗಿಯು ದೇವರ ಹಂಗನ್ನೂ ಮೀರಿ ನಿಲ್ಲುವ ಮಹತಿಗೇರುವುದನ್ನು ನೇರವಾಗಿ ಹೇಳುತ್ತದೆ. ಕಾಯಕ ಮತ್ತು ದಾಸೋಹ ತತ್ವಗಳೆರಡನ್ನೂ ಪರಿಣಾಮಕಾರಿಯಾಗಿ ಪ್ರತಿಪಾದಿಸುವ ಮಾತುಗಳಿವು. ಯಾವುದೇ ಕಾಯಕವಾದರೂ ಅದರಲ್ಲಿ ಕಾಯಾ ವಾಚಾ ಮನಸಾ ತಲ್ಲೀನನಾಗಿ ಬದುಕಿನ ಆನಂದವನ್ನು ಅನುಭವಿಸಬೇಕು, ಕಾಯಕದಿಂದ ಬಂದಿದ್ದರಲ್ಲಿ ಒಂದಿಷ್ಟನ್ನು ಇತರರಿಗಾಗಿ ಮೀಸಲಿಡಬೇಕು. ಮಿಕ್ಕುದನ್ನು ತಾನು ಸ್ವೀಕರಿಸಬೇಕು. ದೇಹವೆಂಬುದು ಜೈವಿಕವಾದದು. ಇದು ಹುಟ್ಟುತ್ತದೆ, ಸಾಯುತ್ತದೆ. ಹಾಗೆಯೇ ರೋಗರುಜನಗಳಿಗೂ ಒಳಗಾಗುತ್ತದೆ. ಈ ನರಳುವಿಕೆ ಮತ್ತು ಸಾಯುವಿಕೆಗಳು ಪ್ರಕೃತಿ ಸಹಜವಾದ ಜೈವಿಕ ಕ್ರಿಯೆಗಳು. ಇದಕ್ಕಾಗಿ ಭಯಗೊಂಡು ಆ ದೇವರ ಮೊರೆಹೋಗುವುದೇಕೆ? ಅದು ಅನವಶ್ಯಕ[2] ಎಂಬುದು ಇಲ್ಲಿ ಸೋಮಣ್ಣನವರ ದೃಢವಾದ ನಿಲುವು. ಇಂತಹ ಹಲವು ಮನಸ್ಸುಗಳನ್ನು ಆ ಕಾಲಘಟ್ಟದ ಚಳವಳಿ ಸೃಷ್ಟಿಸಿತ್ತೆಂಬುದು ಇಂದಿಗೂ ಅಚ್ಚರಿಯ ಸಂಗತಿಯಾಗಿ ತೋರುತ್ತದೆ. ಇದು ಬಸವಣ್ಣನವರ ಬಹುದೊಡ್ಡ ಸಾಧನೆ. ರೋಗರುಜಿನ ಮತ್ತು ಹುಟ್ಟು ಸಾವುಗಳು ಕರ್ಮಾಧೀನವಲ್ಲ, ಅವು ಸಹಜ ಜೈವಿಕ ಕ್ರಿಯೆಗಳು ಎಂದು ಹೇಳುವ ಮೂಲಕ ಕರ್ಮ ಸಿದ್ಧಾಂತದ ವಿರುದ್ಧ ಕಾಯಕ ತತ್ವಕ್ಕೆ ಸಿಕ್ಕ ಬಹು ದೊಡ್ಡ ಗೆಲುವು ಇದು. ಈ ಕಾಯಕ ತತ್ವವೆಂಬುದು ಸತ್ಯ ಅಹಿಂಸೆಗಳಂತೆ ಸಾರ್ವಕಾಲಿಕವಾದ ಮೌಲ್ಯವೇ ಆಗಿದ್ದರೂ ಆಧ್ಯಾತ್ಮಿಕ ಮತ್ತು ಲೌಕಿಕ ಬದುಕಿನ ನೆಲೆಯಲ್ಲಿ ಇದಕ್ಕೊಂದು ವಿನೂತನ ಅರ್ಥವನ್ನು ತಂದುಕೊಟ್ಟವರು ವಚನಕಾರರು. ವಚನಕಾರರು ಪ್ರತಿಪಾದಿಸಿದ ಕಾಯಕ ದಾಸೋಹ ಮೊದಲಾದ ತತ್ವಗಳು ಹರಿಹರ ರಾಘವಾಂಕರಿಂದ ಪ್ರಾರಂಭವಾಗಿ ಮುಂದಿನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅಚ್ಚಳಿಯದ ನಿರಂತರ ಪ್ರಭಾವವನ್ನು ಬೀರುತ್ತಲೇ ಬಂದಿವೆ.

ಜಲಗಾರ ನಾಟಕ ರಚಿತವಾದದ್ದು ಕುವೆಂಪು ಕನ್ನಡ ಎಂ.ಎ. ಓದುತ್ತಿದ್ದ ಸಂದರ್ಭದಲ್ಲಿ. " 1927 ಮತ್ತು 1928ನೆಯ ಎರಡು ವರ್ಷಗಳು ತಮ್ಮ ಸಾಹಿತ್ಯಕ ಸೃಜನಾತ್ಮಕ ಜೀವನದಲ್ಲಿ ಬಹು ಮಹತ್ವದ ವರ್ಷಗಳೆಂದೂ ಕನ್ನಡ ಎಂ.ಎ. ತೆಗೆದುಕೊಂಡಿದ್ದರಿಂದ ಕನ್ನಡ ಸಾಹಿತ್ಯದ ಸಕ್ರಮ ಅಧ್ಯಯನಕ್ಕೆ ಅವಕಾಶ ಒದಗಿತೆಂದೂ ಪರಂಪರೆಯ ಶಾಸ್ತ್ರೀಯವಾದ ಅಭ್ಯಾಸದಿಂದ ಕವಿಯ ಸೃಜನ ಪ್ರತಿಭೆಯ ತಾಯಿ ಬೇರಿಗೆ ಅಮೃತಾಹಾರ ಒದಗಿ ತಾಯಿನೆಲಕ್ಕೆ ಆಳವಾಗಿ ಪ್ರವೇಶ ಲಭಿಸಿತು"[3] ಎಂದು ಆ ಕಾಲಘಟ್ಟದ ಅವರ ಸಾಹಿತ್ಯಿಕ ಬದುಕಿನ ಕುರಿತಾಗಿ ಕುವೆಂಪು ಹೇಳುತ್ತಾರೆ. ಕುವೆಂಪು ಅವರು ಮೊದಲಿಗೆ ಕನ್ನಡ ಸಾಹಿತ್ಯದ ಕ್ರಮಬದ್ಧ ಅಧ್ಯಯನಕ್ಕೆ ತೊಡಗಿದ ಸಂದರ್ಭದಲ್ಲಿ ಬಂದ ನಾಟಕ 'ಜಲಗಾರ'. ಇದು ಪ್ರಕಟವಾದದ್ದು 1928 ರಲ್ಲಿ. ಆದರೆ ಇದನ್ನು ಬರೆದದ್ದು 1927ರಲ್ಲಿ. ಕುವೆಂಪು ಅವರೇ ಹೇಳುವಂತೆ 'ಜಲಗಾರ', 'ಯಮನಸೋಲು' ಮತ್ತು 'ಮಹಾರಾತ್ರಿ' ಮೂರು ನಾಟಕಗಳು ಒಂದಾದರ ಮೇಲೆ ಒಂದರಂತೆ ಮೂರು ನಾಲ್ಕು ದಿನಗಳಲ್ಲಿ ರಚಿತವಾದವು. 'ಜಲಗಾರ' ಸರಳ ರಗಳೆಯಲ್ಲಿ ಪ್ರಕಟವಾದ ಕನ್ನಡದ ಮೊದಲ ನಾಟಕ. "ರವೀಂದ್ರನಾಥರ ಮತ್ತು ಸ್ವಾಮಿ ವಿವೇಕಾನಂದರ ಕೃತಿಗಳು ಆ ನಾಟಕಗಳಿಗೆ ಪ್ರೇರಕವಾದ ವಸ್ತುಗಳನ್ನು ಬಿಂದು ರೂಪದಲ್ಲಿ ಒದಗಿಸಿದ್ದವು. ಮಹಾತ್ಮ ಗಾಂಧೀಜಿಯ ಅಸ್ಪೃಶ್ಯತಾ ನಿವಾರಣ ಮತ್ತು ಹರಿಜನ ದೇವಸ್ಥಾನ ಪ್ರವೇಶ ಚಳವಳಿಗಳು ತಮ್ಮ ಪ್ರಭಾವ ಬೀರಿದ್ದವು."[4] ಎಂದು ಈ ಮೂರೂ ನಾಟಕಗಳ ರಚನೆಯ ಹಿಂದಿನ ಪ್ರೇರಣೆಯನ್ನು ಕುರಿತಾಗಿ ಹೇಳುತ್ತಾರೆ ಕುವೆಂಪು. ಆ ಕಾಲಕ್ಕೆ ಕುವೆಂಪು ಅವರಿಗೆ ಆತ್ಮೀಯರೂ ಹಿರಿಯರೂ ಆಗಿದ್ದ ನಾ ಕಸ್ತೂರಿ ಅವರು ಈ ನಾಟಕವನ್ನು ವಿವೇಕಾನಂದ ರೋವರ್ ಸ್ಕೌಟುಗಳಿಂದ ಅಭ್ಯಾಸ ಮಾಡಿಸಿ ಸ್ಕೌಟು ದಳದ ವಾರ್ಷಿಕೋತ್ಸವದಲ್ಲಿ ಯುವರಾಜ ಕಂಠೀರವ ನರಸರಾಜ ಒಡೆಯರ ಮುಂದೆ ಅವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲು ಆಡಿಸಿದಾಗ ಅದರ ವಿನೂತನ ವಸ್ತು ಮತ್ತು ಪ್ರಯೋಗದ ಕುರಿತಂತೆ ಅನೇಕರು ಆಶ್ಚರ್ಯ ವ್ಯಕ್ತಪಡಿಸಿದ್ದರಂತೆ. ಆದರೆ ಎಂ. ವೆಂಕಟ ಕೃಷ್ಣಯ್ಯನವರು ಮರುದಿನ ತಮ್ಮ ಪತ್ರಿಕೆಯಲ್ಲಿ ಆ ನಾಟಕ ಬ್ರಾಹ್ಮಣರನ್ನು ಅವಹೇಳನ ಮಾಡುವುದಕ್ಕೆ ಬರೆಯಲಾಗಿದೆ, ಹೀಗೆ ಜಾತಿ ದ್ವೇಷದ ವಿಷದ ಹಲ್ಲನ್ನು ಬಿತ್ತುವವರು ವಿಷದ ಫಲವನ್ನು ಅನುಭವಿಸಬೇಕಾಗುತ್ತದೆ ಎಂದು ಕಟುವಾಗಿ ಟೀಕಿಸಿದ್ದರಂತೆ.[5]

ಹೀಗೆ ಈ ಸಂದರ್ಭದಲ್ಲಿ ರಚಿತವಾದ ಮೂರು ನಾಟಕಗಳಲ್ಲಿ ಯಮನ ಸೋಲು ನಾಟಕದ ವಸ್ತು ಪುರಾಣ ಪ್ರಸಿದ್ಧವಾದದ್ದು. ಮಹಾರಾತ್ರಿ ನಾಟಕದ ವಸ್ತು ಐತಿಹಾಸಿಕವಾದದ್ದು. ಜಲಗಾರ ನಾಟಕದ ವಸ್ತು ಮಾತ್ರ ಕುವೆಂಪು ಸ್ವಯಂ ಕಲ್ಪಿಸಿದ್ದು ಹಾಗೂ ನೇರವಾಗಿ ಸಾಮಾಜಿಕವಾದದ್ದು.

ಜಲಗಾರ ಎರಡು ದೃಶ್ಯಗಳ ಪುಟ್ಟ ನಾಟಕ. ಮೊದಲ ದೃಶ್ಯದಲ್ಲಿ ರೈತ, ಪಾರ್ವರು ಮೊದಲಾದವರು ದೇವಾಲಯಕ್ಕೆ ಹೋಗುವ ಸಂಗತಿ ಇದ್ದರೆ ಎರಡನೇ ದೃಶ್ಯದಲ್ಲಿ ಅವರು ಹಿಂದಿರುಗುವ ಚಿತ್ರಣವಿದೆ. ದೇವಾಲಯವೇ ಈ ನಾಟಕದ ಕೇಂದ್ರ, ಅದರ ಸುತ್ತ ಜರುಗುವ ಸಂಗತಿಗಳ ಮೂಲಕ ನಾಟಕ ತೆರೆದುಕೊಳ್ಳುತ್ತಾ ಹೋಗುತ್ತದೆ.

ಭೂ ದೇವಿಯ ಪ್ರಾರ್ಥನೆಯೊಂದಿಗೆ ನಾಟಕದ ಮೊದಲ ದೃಶ್ಯ ಪ್ರಾರಂಭವಾಗುತ್ತದೆ.

ಬಾರ ಸಖಿಯೇ, ಉಷೆಯೇ ಬಾರಾ
ಕೆಂಪಿನ ಮುತ್ತಿನ ಮಾಲೆಯ ತಾರಾ

ಎಂದು ಉಷೆಯನ್ನು ಸ್ವಾಗತಿಸಿದ ಭೂದೇವಿ ರಂಗದಿಂದ ಸರಿದಂತೆ ಜಲಗಾರನ ಪ್ರವೇಶವಾಗುತ್ತದೆ.

ಮಬ್ಬು ಸರಿದು ಮಂಜು ಹರಿಯುವುದನ್ನು ಕಾಯುತ್ತಾ ಕುಳಿತ ಜಲಗಾರ ನಲ್ಲಬ್ಬಗಳನ್ನು ಹಾಡುತ್ತ ಕೂರುತ್ತಾನೆ. ಮೂಡಣ ದೆಸೆಯನ್ನು ನೋಡಿ ರಮ್ಯ ಅರುಣೋದಯದ ಚೆಲುವನ್ನು ಕುರಿತು, ಸೃಷ್ಟಿಯ ಸೌಂದರ್ಯವನ್ನು ಕುರಿತು ಜಲಗಾರನು ಆಡುವ ಮಾತುಗಳು ಹೀಗಿವೆ.

ಸೃಷ್ಟಿ ಕರ್ತನನೆಮಗೆ ಸಾಧಿಸಲು, ತೋರಿಸಲು,
ಸೃಷ್ಟಿಯಿದು ಸಾಲದೇ? ಸೃಷ್ಟಿ ಸೌಂದರ್ಯಮಿದು
ಸಾಲದೇ? ಪಳವಾತದೇಕೆ? ಬಿಜ್ಜೆಯೇಂ
ತೋರ್ಕುಮೇ ಎದೆಯರಿವು ತೋರದಾ ಪರಮನಂ?

ಸೃಷ್ಟಿಕರ್ತನಾದ ಆ ಪರಮನನ್ನು ಸಾಧಿಸಲು, ಕಾಣಲು ಯಾವುದೇ ಶಾಸ್ತ್ರ, ವಿದ್ಯೆಗಳ ಅರಿವಿಗಿಂತ ಎದೆಯ ಅರಿವು ಮುಖ್ಯ. ಸೃಷ್ಟಿ ಸೌಂದರ್ಯದ ಮೂಲಕವೇ ಸೃಷ್ಟಿಕರ್ತನನ್ನು ಪಡೆಯಲು ಸಾಧ್ಯ

ಎಂಬುದು ಜಲಗಾರನ ನಿಲುವು. ಇದು ಕವಿ ಕುವೆಂಪು ಅವರ ನಿಲುವೂ ಹೌದು. ಜಲಗಾರನು ಹೀಗೆ ಹಾಡುತ್ತಾ ಕುಳಿತಿರುವಾಗ ರೈತನೊಬ್ಬನು ಹಾಡುತ್ತಾ ಬರುತ್ತಾನೆ. "ನೇಗಿಲ ಯೋಗಿಯು ನಾನು ಮಣ್ಣಿನ ಭೋಗಿಯ ನಾನು" ಎನ್ನುವ ರೈತ ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು; ವೇದಗಳೆಲ್ಲಾ ನೆಗೆನೆಗೆದರಿಯದ ಅಂತ್ಯದ ಆದಿಯನು" ಎಂದು ಹಾಡುವಾಗ ಆತನ ದೃಷ್ಟಿಯ ಕುರಿತು ಬೆರಗು ಗೊಳ್ಳುವಂತಾಗುತ್ತದೆ. ರೈತರ ಬಲದಿಂದಲೇ ದೊರೆಗಳು ಆಳಿದರು; ಕವಿಗಳು ನಲ್ಗಬ್ಬಗಳ ಬರೆದರು, ಶಿಲ್ಪಿಗಳು ಕಲ್ಲಿನಲಿ ಕತೆಗಳನು ಕೆತ್ತಿದರು ಎಂಬ ಆತನ ಹೆಮ್ಮೆ ಸಹಜವಾದುದೇ ಅಗಿದೆ. ಆದರೆ ಜಲಗಾರನೊಂದಿಗೆ ನಡೆಯುವ ಆತನ ಮಾತುಕತೆಗಳಿಂದ 'ನೇಗಿಲ ಗೆರೆಯೇ ಮುಕ್ತಿಯ ದಾರಿಯನ್ನು ತೋರುತ್ತದೆ' ಎಂಬುದು ಆ ರೈತನ ಹೃದಯಕ್ಕಿಳಿಯದ ಕೇವಲ ಒಣ ಮಾತೆಂಬುದು ನಮ್ಮ ಗಮನಕ್ಕೆ ಬರುತ್ತದೆ.

ಹಣ್ಣುಕಾಯಿಗಳೊಂದಿಗೆ ಹೊರಟಿರುವ ರೈತನನ್ನು ಜಲಗಾರ "ಮುಂಜಾನೆಯೊಳಗೆಲ್ಲಿ ಹೋಗುತಿಹೆ ರೈತ?" ಎಂದು ಕೇಳುತ್ತಾನೆ. ಅಂದು ಆ ಊರಿನ ಶಿವಗುಡಿಯ ಜಾತ್ರೆ. ಸಂಭ್ರಮದಿಂದ ಅಲ್ಲಿಗೆ ಹೊರಟಿರುವ ಆತ ಜಲಗಾರನನ್ನು ಜಾತ್ರೆಗೆ ಕರೆಯುತ್ತಾನೆ. ಆದರೆ ಅಲ್ಲಿ ಅವನಿಗೆ ಪ್ರವೇಶವಿಲ. ಜೊತೆಗೆ ಜಲಗಾರನಿಗೆ ದೇಗುಲಕ್ಕೆ ಬರುವ ಆಸಕ್ತಿಯೂ ಇಲ್ಲ. ಆತನ ಪಾಲಿಗೆ ಕರ್ಮವೇ ಆರಾಧನೆ, ಸೇವೆಯೇ ಪೂಜೆ. 'ನೆನ್ನೆ ದೇಗುಲದೆಡೆಗೆ ಹೋದ ನನ್ನ ಕಂದನನ್ನು ಬೈದು ನೂಕಿದ್ದಾರೆ. ಕಾರಣ ಶಿವಗುಡಿಯ ಶಿವನು ಜೋಯಿಸರ ಶಿವನಂತೆ' ಎಂದು ನೊಂದು ನುಡಿಯುತ್ತಾನೆ.

> ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ
> ಕೊಳೆತ ಕಸದೊಳಗಿಹನು. ಕಪ್ಪುರದೊಳಿಲ್ಲ;
> ಮಂಗಳಾರತಿಯೊಳಿಲ್ಲ; ಹೂಗಳಲ್ಲಿಲ್ಲ;
> ಯಾವೆಡೆಯೊಳಾನಿಹೆನೋ ಅವನಲ್ಲಿಯೇ ಇಹನು.
> ನನ್ನದೆಯೆ ದೇಗುಲ; ನನ್ನೊಲ್ಮೆಯದೆ ಪೂಜೆ.

ನಾನೆಲ್ಲಿ ಭಕ್ತಿಯಿಂದ ಕೈಮುಗಿವೆನೋ ಅಲ್ಲಿಯೇ ಶಿವನಿದ್ದಾನೆ. ನನ್ನೆದೆಯೇ ಶಿವನ ದೇಗುಲ, ಓಲವೇ ಅವನ ಪೂಜೆ ಎನ್ನುವ ಜಲಗಾರ ಶಿವಗುಡಿಗೆ ಹೊರಡಿರುವ ರೈತನನ್ನು ಕೇಳುವ ಮಾತು:

> ಶಿವನ ಕಾಣಲು ನೀನು
> ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ
> ದಿವ್ಯ ದೇವಾಲಯದ ಶಿವನ ಕಾಣೆಯ ನೀನು?

'ಉಳುವಾಗ ನೆಡುವಾಗ ಪೂಜೆ ಮಾಡುವೆ ನೀನು. ನಮ್ಮ ಜೀವವೇ ನಿಚ್ಚ ಪೂಜೆ. ನಮ್ಮ ಕರ್ಮವೇ ನಿತ್ಯ ಯೋಗ' ಎಂದು ಹೇಳಿ ಅವನನ್ನು ತಿದ್ದುವ ಪ್ರಯತ್ನ ಮಾಡಿತ್ತಾನೆ. ಕೆಲವೇ ಕ್ಷಣಗಳ ಹಿಂದೆ 'ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು' ಎಂದು ಹಾಡುತ್ತಿದ್ದ ರೈತ ಈಗ "ಸೊಗದ ಮೋರೆಯನೇ ಕಂಡರಿಯನೀ ಜಲಗಾರ. ಪೂಜೆ ಎಂಬುದನರಿಯ; ದೇವನೆಂಬುದನರಿಯ; ಹುಟ್ಟುಗುಣ ಸುಟ್ಟರೂ ಹೋಗುವುದೇ?" ಎಂದು ತನ್ನಲ್ಲೇ ಹೇಳಿಕೊಳ್ಳುತ್ತಾ ಆತನ ಮಾತನ್ನು ತಿರಸ್ಕರಿಸಿ ಮುನ್ನಡೆಯುತ್ತಾನೆ.

ಇಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಹೇಳುವಂತೆ ರೈತ ಮತ್ತು ಜಲಗಾರ ಇಬ್ಬರ ಮಾತುಗಳಲ್ಲಿಯೂ ಕಾಯಕತತ್ವವೇ ಪ್ರತಿಪಾದಿತವಾಗಿದೆ. "ಜಲಗಾರ ಹಾಗೂ ರೈತ ಇಬ್ಬರೂ ವೈದಿಕ ಸಂಸ್ಕೃತಿಯನ್ನು ವಿರೋಧಿಸುವ ಕಾಯಕ ಸಂಸ್ಕೃತಿಯನ್ನು ಪ್ರತಿಪಾದಿಸುವ ಪ್ರತಿನಿಧಿಗಳಂತೆ ಕಾಣಿಸುತ್ತಾರೆ ಆದಾಗ್ಯೂ ರೈತ ಶ್ರೇಣಿಕೃತ ಸಮಾಜದ ನಿಯಮಗಳನ್ನು ಪಾಲಿಸುವವನಂತೆ ಚಿತ್ರತವಾಗಿದ್ದಾನೆ."[6] ಇಲ್ಲಿ ಕುವೆಂಪು ಜಾಲಗಾರನ ಮಾತುಗಳಲ್ಲಿ ಕಾಯಕದ ಮಹತ್ವವನ್ನು ಹೇಳುತ್ತಾ ಸಾಂಪ್ರದಾಯಿಕ ನೆಲೆಯ ದೇವಾಲಯದ ಪರಿಕಲ್ಪನೆಯನ್ನು ನಿರಾಕರಿಸುವುದನ್ನು ಕಾಣಬಹುದು. 'ಶಿವನ ಕಾಣಲು ನೀನು ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದ ಶಿವನ ಕಾಣೆಯ ನೀನು?' 'ನನ್ನೆದೆಯೇ ದೇಗುಲ, ನನ್ನೊಲ್ಮೆಯದೆ ಪೂಜೆ' ಎಂಬ ಜಲಗಾರನ ಮಾತುಗಳಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತದೆ.

ತನ್ನಂತೆಯೇ ಕಾಯಕ ಜೀವಿಯಾದರೂ ವೈದಿಕ ಸಂಸ್ಕೃತಿಯ ಅನುಕರಣೆಗೆ ಬಿದ್ದು ಅವರಂತೆಯೇ ವರ್ತಿಸುವ ರೈತನ ಕುರಿತು ಜಲಗಾರನಿಗೆ ಮರುಕವಿದೆ. ರೈತ ಗುಡಿಯ ಕಡೆಗೆ ಹೊರಟಂತೆ ಜಲಗಾರ ತನ್ನಲ್ಲಿಯೇ ಹೇಳಿಕೊಳ್ಳುವ ಮಾತುಗಳಿವು.

> ಜಗದ ದೇಗುಲದಲ್ಲಿ ಜಗದುದಯ ಕಾರಣನ
> ಕಾಣದವನೆಂತು ಕಾಣ್ಬನು ಶಿನವ, ಗುಡಿಯಲ್ಲಿ?
> ತಣ್ಗದಿರ ಬೆಂಗದಿರನರಿಲುಗಳೆ ಸೊಡರುಗಳು.
> ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು
> ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ.
> ಬಿತ್ತರದ ಬಾಂದಳವೆ ಗೋಪುರಂ! ಹೊಳೆಗಳಲಿ
> ಹರಿವ ಸಲಿಲವೆ ತೀರ್ಥ; ಸುಮಗಂಧವೇ ಧೂಪ.
> ಹಕ್ಕಿಯಿಂಚರವೇ ಸುಸ್ವರ ಮೇಳ! ಎದೆಯೊಲವೆ
> ವರ ಧರ್ಮಶಾಸ್ತ್ರ, ಭಕ್ತಿಯೇ ದಿವ್ಯಾತ್ಮ ಯಜ್ಞ,
> ಎದೆಯ ಮಣೆಯೇ ಯಜ್ಞಶಾಲೆ!
> ನಲ್ವಾತುಗಳೇ ಮಂತ್ರಘೋಷ; ನೀತಿಯೆ
> ಪರಮ ವೇದ. ತಿರೆಗಿಂತ ದೇಗುಲವದೊಳದೇನ್?

ಇಲ್ಲಿ ಈ ರೂಢಿಯ ದೇಗುಲ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಪೂಜಾರ್ಚನೆಯ ಸಕಲ ಪರಿಕರಗಳಿಗೂ ಪ್ರಕೃತಿಯಲ್ಲಿ ಪರ್ಯಾಯಗಳನ್ನು ಸೂಚಿಸಿರುವುದು ಕಾಣುತ್ತದೆ. 'ಪ್ರಕೃತಿಯಾರಧನೆಯೆ ಪರಮನಾರಾಧನೆ' ಎಂಬ ನಿಲುವಿನ ಕುವೆಂಪು ಅವರಿಗೆ ಇದು ಸಹಜವೇ ಆಗಿದೆ. ತಿರೆಯನ್ನೇ ನಂಬಿ ಬದುಕುವ ರೈತ ಜಗದುದಯ ಕಾರಣನನ್ನು ಜಗದ ದೇಗುಲದಲ್ಲಿ ಕಾಣದೆ ಗುಡಿಯಲ್ಲಿ ಅರಸುವುದರ ಕುರಿತು ಜಲಗಾರನಿಗೆ ಅಪಾರ ಬೇಸರವಿದೆ. ರೂಢಿಯ ದೇವಾಲಯಕ್ಕೆ 'ದೇಹವೇ ದೇಗುಲ' ಎಂಬುದು ಒಂದು ಪರ್ಯಾಯವಾದರೆ. 'ಪಕೃತಿಯೇ ದೇಗುಲ' ಎಂಬದು ಮತ್ತೊಂದು ಪರ್ಯಾಯ. ಎರಡೂ ಪರ್ಯಾಯಗಳನ್ನು ಅಲ್ಲಮನ ಈ ವಚನ ಭೂಮವಾಗಿ ನಿರೂಪಿಸುತ್ತದೆ.

> ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ
> ಆಕಾಶಗಂಗೆಯಲ್ಲಿ ಮಜ್ಜನ
> ಹೂವಿಲ್ಲದ ಪರಿಮಳದ ಪೂಜೆ
> ಹೃದಯಕಮಲದಲ್ಲಿ ಶಿವಶಿವಾ ಎಂಬ ಶಬ್ದ
> ಇದು ಅದ್ವೈತ ಕಾಣಾ ಗುಹೇಶ್ವರ.

ಕುವೆಂಪು ಅವರು ಸುಮಾರು ಇದೇ ಕಾಲಖಂಡದಲ್ಲಿ ರಚಿಸಿರುವ 'ನಿನ್ನವನು ನಾನಲ್ಲವೆ?' ಎಂಬ ಕವಿತೆಯಲ್ಲಿಯೂ ಇದೇ ಭಾವವನ್ನು ಕಾಣಬಹುದು.

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನವು, ದೇವದೇವ;
ಬುದ್ಧಿಯಿದು ಗುಡಿಯೊಳುರಿಯುವ ದೀಪವೆಂದು
ಅಮಲ ಚಿಂತೆಯ ತೈಲವನು ತುಂಬುವೆ.

ಗಂಟೆಗಳ ನಾ ಹೊಡೆಯೆ, ಶಂಕವನು ನಾನೂದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಾಲ್ಲವೇನೊ, ದೊರೆಯೆ!

ಇದೇ ಸಂದರ್ಭದಲ್ಲಿ ಕುವೆಂಪು ಅವರು ಸ್ವಾಮಿ ಸಿದ್ಧೇಶ್ವರಾನಂದರ ಜೊತೆಗೆ ಚಾಮುಂಡಿ ಬೆಟ್ಟಕ್ಕೆ ತೆರಳಿದರೂ ದೇವಾಲಯಕ್ಕೆ ಹೋಗದೇ ದಾರಿಯ ಮಂಟಪದಲ್ಲಿಯೇ ಕುಳಿತು ಹಿಂದಿರುಗಿದ ಸಂಗತಿಯನ್ನು ಸ್ಮರಿಸಿದರೆ ಜಲಗಾರ ನಾಟಕವನ್ನು ಬರೆದ ಆ ದಿನಗಳಲ್ಲಿನ ಅವರ ದೇಗುಲ ನಿರಾಕರಣೆ ಮತ್ತು ವರ್ಣಾಶ್ರಮ ವಿರೋಧಿ ನೆಲೆಯ ಚಿಂತನೆಗಳ ಸಂಕ್ಷೋಭೆಯ ಸ್ಥಿತಿಯನ್ನು ಗ್ರಹಿಸಬಹುದು.

ಜಲಗಾರನ ಹಾಡನ್ನು ಕೇಳಿದ ಪಾರ್ವರಿಬ್ಬರು ಆತನನ್ನು ನೋಡುವುದಕ್ಕೂ ಮೊದಲು ತಾವು ಕೇಳಿದ ಆ ಇನಿದನಿಯನ್ನು ಹೊಗಳುತ್ತಾರೆ. ಯಾರೋ ದಿವ್ಯಾತ್ಮನೇ ಹಾಡುತ್ತಿರಬೇಕೆಂದು ಭಾವಿಸುತ್ತಾರೆ. ಆದರೆ ಅದನ್ನು ಹಾಡಿದವನು ಜಲಗಾರನೆಂಬುದು ತಿಳುದ ಮೇಲೆ ಅವರು ಹೇಳುವ ಮಾತುಗಳಿವು.

ಮೊದಲನೆಯ ಪಾರ್ವ
ಸಂಗೀತವನಿತೇನು ಮನಮೋಹಿಪಂತೆ
ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್
ಒಲಿಯುವಳೆ? ಎಂದಿಗೂ ಇಲ್ಲ.

ಎರಡನೆಯ ಪಾರ್ವ
ಶೂದ್ರರೊಳ್
ಕವಿವರ್ಯರುದಿಸುವರೆ? ಹುಟ್ಟುವರೇ ಪಂಡಿತರ್?
ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್?
ಅಸದಳಮ್?

ಶ್ರೇಣಿಕೃತ ಸಮಾಜದ ವಕ್ತಾರರಂತೆ ಕಾಣುತ್ತಾರೆ ಇವರು. "ಹುಟ್ಟಿಗೂ ಪ್ರತಿಭೆಗೂ ಸಂಬಂಧ ಕಲ್ಪಿಸುವ ರೂಢಿಯ ವ್ಯವಸ್ಥೆಯನ್ನು ಕುವೆಂಪು ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಅಷ್ಟೇ ಅಲ್ಲ 20ನೇ ಶತಮಾನದ ಆರಂಭದಲ್ಲಿ, ಆಧುನಿಕ ಶಿಕ್ಷಣ ಆಗುತ್ತಾನೆ ಹೊಸ ಆಲೋಚನೆಗಳನ್ನು ರೂಪಿಸುತ್ತಿದ್ದ ಕಾಲದಲ್ಲಿ ಜಾತಿ ವ್ಯವಸ್ಥೆಯಲ್ಲಿ 'ವಿದ್ಯೆ' –ಕೆಲವರ ಸ್ವತ್ತು, ಕೆಲವರ ಹಕ್ಕು ಎಂಬ ನಿಲುವನ್ನು ಸಾಮಾಜಿಕ ವ್ಯವಸ್ಥೆ ಉಳಿಸಿಕೊಳ್ಳಲು ಹೆಣಗುತ್ತಿದ್ದಂತೆ ತೋರುತ್ತದೆ, ಕುವೆಂಪು ಅವರಂಥ ಶೂದ್ರ ಸಮುದಾಯದ ಪ್ರತಿಭಾವಂತರು ಸಹಜವಾಗಿಯೇ ಇದನ್ನು ಪ್ರಶ್ನಿಸುತ್ತಿದ್ದರು, ಮಾತ್ರವಲ್ಲ, ತಮ್ಮ ಪ್ರತಿಭೆಯಿಂದಲೇ ಅದಕ್ಕೆ ಉತ್ತರ ಕೊಡಲು ಪ್ರಯತ್ನಿಸುತ್ತಿದ್ದರು."[7]

ಅವರ ಮಾತನ್ನು ಕೇಳಿ ಜಲಗಾರ ನಗುತ್ತಾ ಗುಡಿಸಲಾರಂಭಿಸುತ್ತಾನೆ. ನಂತರ ಒಬ್ಬ ಯುವಕನ ಪ್ರವೇಶವಾಗುತ್ತದೆ. ಅವನು ದೈವದ ಲೀಲೆಯ ಬಗ್ಗೆ, ಈ ಲೋಕ ರಹಸ್ಯದ ಬಗ್ಗೆ ಕುತೂಹಲಿಯಂತೆ ಕಾಣುತ್ತಾನೆ. ಜಲಗಾರನ ಕುರಿತು ಅವನಿಗೆ ಬಹಳ ಗೌರವವಿದೆ. ಜಲಗಾರನನ್ನು ದೇವಾಲಯಕ್ಕೆ ಬಾ ಎಂದು ಕರೆಯುವನು. ಆತ ನಯವಾಗಿ ನಿರಾಕರಿಸಿದಾಗ ಕಾಯಕ ನಿರತನಾದ ಜಲಗಾರನಿಗೆ ಕೈಮುಗಿದು ಹೋಗುತ್ತಾನೆ. ನಂತರ ಒಬ್ಬ ತಿರುಕ, ಭಟ್ಟ, ಇಬ್ಬರು ತರುಣರು ರಂಗಪ್ರವೇಶಿಸುತ್ತಾರೆ.

ತರ್ಕಬದ್ಧವಾಗಿ ಮಾತನಾಡುವ ಈ ತರುಣರು ಮೇಲ್ನೋಟಕ್ಕೆ ಬಹಳ ವಿಚಾರವಾದಿಗಳಂತೆ ಕಂಡರೂ ಹೃದಯದಲ್ಲೀ ಇನಿತೂ ಕಾರುಣ್ಯವಿಲ್ಲದವರು. ಕಣ್ಣಿಲ್ಲದ ತಿರುಕನು ಹಸಿವಿನಿಂದ ನರಳುತ್ತಾ ಭಿಕ್ಷೆ ಬೇಡಿದರೆ ಅವನನ್ನು ಒದ್ದು ನೂಕಿ ಹೋಗುತ್ತಾರೆ. ತಿರುಕನ ರಕ್ಷಣೆಗೆ ಧಾವಿಸಿ ಬರುವ ಜಲಗಾರ ತಾನು ತಂದ ಅನ್ನವನ್ನೇ ಅವನೊಂದಿಗೆ ಹಂಚಿ ತಿನ್ನುತ್ತಾನೆ.

ಎರಡನೇ ದೃಶ್ಯದಲ್ಲಿ ದೇವಸ್ಥಾನಕ್ಕೆ ಹೋದವರು ಹಿಂದಿರಿಗೆ ಬರುವ ಚಿತ್ರಣವಿದೆ. ರೈತ "ಜಲಗಾರ ಪುಣ್ಯವಿಲ್ಲವೋ ನಿನಗೆ! ಜಾತ್ರೆಯದು ವೈಭವದ ಜಾತ್ರೆ! ಜನವೇನು! ಧನವೇನು!... ನಾನದನ್ನು ಹೇಳಿ ಮುಗಿಸಲಾರೆ." ಎಂದು ಜಾತ್ರೆಯ ಸಂಭ್ರಮವನ್ನು ಬಣ್ಣಿಸುತ್ತಾನೆ. ಆಗ ರೈತನಿಗೆ ಜಲಗಾರ ಮತ್ತೆ ಮತ್ತೆ ಕೇಳುವ ಮಾತು ಇದು:

'ಶಿವನ ಗುಡಿಯಂದೇನು ತಂದಿರುವೆ, ಹೇಳು ಶಿವನ
ತರಲಿಲ್ಲವೇ?'

ಜಲಗಾರನಾಗಿ ಮಾತುಗಳು ಆ ರೈತನಿಗೆ ಮರಳುತನದಂತೆ ಕಾಣುತ್ತವೆ. ನಂತರ ಹುಡುಗಿಯೊಬ್ಬಳು ರಂಗ ಪ್ರವೇಶಿಸಿ ತನ್ನ ಸಂಕಟದ ಹಾಡನ್ನು ಹಾಡುತ್ತಾಳೆ. ಪಾರ್ವರಿಬ್ಬರೂ ದಕ್ಷಿಣೆಯ ಹಣವನ್ನು ಸಂತಸದಿಂದ ಹಂಚಿಕೊಂಡು ಬರುತ್ತಿರುತ್ತಾರೆ. ಕಬ್ಬಿಗನೊಬ್ಬ ಪ್ರವೇಶಿಸಿ ಬಾಳಿನ ಸವಿಯ ಬಗ್ಗೆ ಸಂದೇಶವನ್ನು ಹಾಡಿನ ಮೂಲಕ ಸಾರುತ್ತಾನೆ.

ನಂತರ ಬಾಲಕರ ಗುಂಪು ಹಾಡುತ್ತಾ ಬಂದು 'ಜವನ ಮೀಸೆಯನೆಳೆವೆವು! ಕೋರೆದಾಡೆಯ ಸೆಳೆವೆವು!' ಎಂದು ತಮ್ಮ ಲೀಲಾ ಪೂರ್ಣವಾದ ಜೀವನವನ್ನು ಪ್ರಕಟಿಸುತ್ತಾರೆ. ಹೀಗೆ ಜನರೆಲ್ಲ ಬಂದು ಹೋಗುವುದು ಹಾಗೂ ಇವರೆಲ್ಲ ಹಾಡುತ್ತಾ ಹೋಗುವುದನ್ನು ಜಲಗಾರ ಒಬ್ಬನೇ ಕುರಿತು ಗಮನಿಸುತ್ತಾನೆ. ಡಾ. ತಿಪ್ಪೇರುದ್ರಸ್ವಾಮಿ ಅವರು ಹೇಳುವಂತೆ ಒಂದು ದೃಷ್ಟಿಯಿಂದ ನಾಟಕವನ್ನು ಇಲ್ಲಿಗೆ ಮುಗಿಸಬಹುದಾಗಿತ್ತು.[8] ಆದರೆ ಮುಂದೆ ಸಾಕಾರ ರೂಪಿ ಶಿವನು ಜಲಗಾರನ ಮುಂದೆ ಕಾಣಿಸಿಕೊಳ್ಳುತ್ತಾನೆ. ಈ ಮೂಲಕ ಕುವೆಂಪು ನಾಟಕಕ್ಕೆ ಪೌರಾಣಿಕ ಪರಿವೇಶ ನೀಡುತ್ತಾರೆ. ಆ ಮೂಲಕ ನಾಟಕದಲ್ಲಿ ಪ್ರತಿಪಾದಿಸುವ ಮೌಲ್ಯಗಳನ್ನು ಸಾರ್ವಕಾಲಿಕ ಪ್ರಜ್ಞೆಯನ್ನಾಗಿಸುತ್ತಾರೆ.

"ನೀನಾರು ಆಕೃತಿಯೇ!ನೀನಾರು?" ಎಂದು ಜಲಗಾರ ಕೇಳುವ ಮಾತಿಗೆ 'ಅಂಜದಿರ ಸೋದರನೆ, ಅಂಜದಿರು ನಾ ನಿನ್ನ ಬಂಧು! ನಾನೊಬ್ಬ ಜಲಗಾರ. ಅಂಜದಿರು ಸೋದರನೇ! ಜಗದ ಜಲಗಾರ ನಾನು! ಶಿವನೆಂದು ಕರೆಯುವರು ಎನ್ನ" ಎಂದುತ್ತರಿಸುತ್ತಾನೆ ಶಿವ. "ನಿನ್ನನಾ ಶಿವನೆಂದು ನಂಬುವುದೆಂತು?... ಪಂಡಿತರು ಬೇರೊಂದು ರೀತಿಯಲಿ ಬಣ್ಣಿಸಿರುವರು ನಿನ್ನ." ಎಂದು ಜಲಗಾರ ಅನುಮಾನ ವ್ಯಕ್ತಪಡಿಸಿದಾಗ ಶಿವನು ಹೇಳುವ ಮಾತುಗಳು ತುಂಬಾ ಮಹತ್ವಪೂರ್ಣವಾದವು:

ಬಿಜ್ಜೆವಳರಾ ಕವಡು ಬಣ್ಣನೆಯ ನಂಬದಿರು,
.............

ಸೋದರನೆ, ಶಿವನು ಶಾಸ್ತ್ರಿಗಳ ಶಿವನಲ್ಲ!
ಕಾವ್ಯಗಳ ಶಿವನಲ್ಲ! ಕವಿತೆಯಾ ಶಿವನಲ್ಲ!
ಬೆಳ್ಳಿಬೆಟ್ಟದ ಮೇಲೆ ಗಿರಿಜೆಯೊಡಗೂಡಿ
ಸರಸವಾಡುವ ರಸಿಕ ಶಿವನಲ್ಲ! ಬ್ರಹ್ಮಾಂಡ
ಒತ್ತುತಿಹ ಕಸದ ರಾಶಿಯ ಮೇಲೆ ಹತ್ತಿ,

ನಿಂತು ನರ್ತನವೆಸಗುತಿಹ ತೋಟಿ ನಾನು!
ನಿಜ ಶಿವನು ಜಲಗಾರ! ನಿನ್ನ ಮುಂದಿಹನು, ನೋಡು!

ಜನಿವಾರ ಬೂದಿಗಳು ಇಲ್ಲದೆಯೆ, ಶಿವಗುಡಿಗೆ
ಸೇರಿಸರು ಶಿವನಾದ ಎನ್ನ. ಅದರಿಂದ
ನಿಜವಾದ ಶಿವನು, ಜಲಗಾರ ಶಿವನು
ಶಿವಗುಡಿಯ ಪೀಠದಲ್ಲಿ ಎಂದೆಂದಿಗೂ ಇಲ್ಲ.

ಶಾಸ್ತ್ರಿಗಳು ಕೊಟ್ಟ ಆ ರೂಪವೆಲ್ಲವೂ ತೊಲಗಿದರೆ ಉಳಿಯುವವನು ಜಗದ ಜಲಗಾರನೇ. "ಊರ ತೋಟಿಯು ನೀನು; ಜಗದ ತೋಟಿಯು ನಾನು! ನೀನೇ ನಾನಾಗಿಹೆನು! ನಾನೆ ನೀನಾಗಿರುವೆ" ಎನ್ನುತ್ತಾ ಬಾಹು ಚಾಚುವ ಶಿವನ ತೆಕ್ಕೆಯಲ್ಲಿ 'ಶಿವ ನಾನು ಶಿವ ನಾನು" ಎನ್ನುತ್ತಾ ಸೇರಿ ಹೋಗುತ್ತಾನೆ ಜಲಗಾರ. ಭಕ್ತ ಭಗವಂತನ ಸಾಮರಸ್ಯದ ಈ ಪ್ರತಿಮೆಯ ಮೂಲಕ ನಾಟಕ ಮುಕ್ತಾಯವಾಗುತ್ತದೆ.

"ಗಾಂಧೀಜಿ, ಪರಮಹಂಸ, ವಿವೇಕಾನಂದ, ಕರ್ಮಸಿದ್ಧಾಂತ, ಆದುನಿಕ ಶಿಕ್ಷಣದ ಫಲಿತವಾಗಿ ಬದಲಾಗುತ್ತಿದ್ದ ಸಾಮಾಜಿಕ ಪರಿಸರ, ಶೂದ್ರ ಚಳುವಳಿ ಇವೆಲ್ಲವೂ ಕುವೆಂಪು ವ್ಯಕ್ತಿತ್ವವನ್ನು ಏಕಕಾಲದಲ್ಲಿ ಪ್ರಭಾವಿಸಿದ ಸಂಗತಿಗಳು. ಈ ಎಲ್ಲದರ ದಟ್ಟ ಪರಿಣಾಮ– 'ಜಲಗಾರ' ನಾಟಕದಲ್ಲಿದೆ"[9] ಇದರೊಂದಿಗೆ ವಚನಕಾರರ ಕಾಯಕ ತತ್ವ, ದೇಗುಲ ನಿರಾಕರಣೆಯ ನಿಲುವುಗಳು ನಾಟಕದೊಳಗೆ ಎಣೆದುಕೊಂಡಿವೆ. ಕೇವಲ ಎರಡು ದೃಶ್ಯಗಳ ಪುಟ್ಟ ನಾಟಕವಾದರೂ ಕಾಲದ ಹಲವು ಸಂಕೀರ್ಣ ವಿಚಾರಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಜಲಗಾರ ನಾಟಕ ವಚನಕಾರರ ಕಾಯಕ ತತ್ತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಪಾದಿಸುತ್ತದೆ.

**ಟಿಪ್ಪಣಿಗಳು**


1. ಲಿಂಗದೇವರು ಹಳೆಮನೆ, ಕುವೆಂಪು ನಾಟಕಗಳು –ಒಂದು ಹಿನ್ನೋಟ, ಕುವೆಂಪು ಒಂದು ಪುನರನ್ವೇಷಣೆ– ಸಂ.ಡಿ.ಎಸ್.ನಾಗಭೂಷಣ, ಪುಟ 212 (2011)
2. ರಂಜಾನ್ ದರ್ಗಾ, ಬಸವಣ್ಣನವರ ದೇವರು, (2019)
3. ಕುವೆಂಪು, ನೆನಪಿನ ದೋಣಿಯಲ್ಲಿ, ಪುಟ, 778 (2019)
4. ಕುವೆಂಪು, ನೆನಪಿನ ದೋಣಿಯಲ್ಲಿ, ಪುಟ, 783 (2019)
5. ಕುವೆಂಪು, ನೆನಪಿನ ದೋಣಿಯಲ್ಲಿ, ಪುಟ, 783 (2019)
6. ನರಹಳ್ಳಿ ಬಾಲಸುಬ್ರಮಣ್ಯ, ಬಾ ಕುವೆಂಪು ದರ್ಶನಕೆ, ಪುಟ 54 (2019)
7. ನರಹಳ್ಳಿ ಬಾಲಸುಬ್ರಮಣ್ಯ, ಬಾ ಕುವೆಂಪು ದರ್ಶನಕೆ, ಪುಟ 56 (2019)
8. ಡಾ.ಎಚ್.ತಿಪ್ಪೆರುದ್ರಸ್ವಾಮಿ, ಕುವೆಂಪು ಅವರ ನಾಟಕಗಳು (2017)
9. ನರಹಳ್ಳಿ ಬಾಲಸುಬ್ರಮಣ್ಯ, ಬಾ ಕುವೆಂಪು ದರ್ಶನಕೆ, ಪುಟ 57 (2019)